# ವಿಡಿಐಟಿ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಸಾಧನೆ



**ಕೊಂಕಣವಾಹಿನಿ ನ್ಯೂಸ್,**

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಶೈಕ್ಷಣಿಕ ಮತ್ತು ಸಂಶೋಧನ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ.

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಅವರ ಸಂಶೋಧನಾ ಪ್ರಬಂಧ "ವೆಕ್ಟರ್ ಕ್ವಾಂಟೈಸೇಷನ್ ಬೇಸ್ಡ್ ಕಂಪ್ರೆಶನ್ ಯೂಸಿಂಗ್ ಡಿಸಿಟಿ ಅಂಡ್ ಎಸ್‌ವಿಡಿ ಅಲ್ಗೋರಿದಮ್ ಆಫ್ ಡಿಜಿಟಲ್ ಇಮೇಜ್ ಅಂತರಾಷ್ಟ್ರೀಯ ಮಟ್ಟದ ತಾಂತ್ರಿಕ ಪತ್ರಿಕೆ ಸ್ಪಿಂಜರ್‌ನಲ್ಲಿ ಪ್ರಕಟಗೊಳ್ಳಲು ಆಯ್ಕೆಯಾಗಿದೆ. ಇದೇ ವಿಭಾಗದ 7ನೇ ಸೆಮಿಸ್ಟರ್‌ನ ವಿದ್ಯಾರ್ಥಿನಿ ಸಂಜನಾ ಶಿವಪುರ ಮಠ ಹಾಗೂ ಸಂಜನಾ ಸವದತ್ತಿ ಗೆ ಅಂತರರಾಷ್ಟ್ರೀಯ ಮಟ್ಟದ ಐಇಇಇ ಸಂಸ್ಥೆಯು 50,000 ಮತ್ತು 10,000 ರೂಪಾಯಿ ವಿದ್ಯಾರ್ಥಿ ವೇತನ ನೀಡಿದೆ. ಇ ಆಂಡ್ ಸಿ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಸಿರಿಗೌರಿ ಎಂ. ಹಾಗೂ ತರುಣ್ ಎಸ್ ಗೆ ಎಐಸಿಟಿಇ ಯು ಭಾರತ ಸರ್ಕಾರದ ಸಿ– ಡಾಕ್ ತ್ರಿವೇಂದ್ರಂನಲ್ಲಿ ವೇತನ ಸಹಿತ ಇಂಟರ್ನಶಿಪ್‌ಗಾಗಿ ಆಯ್ಕೆ ಗೊಂಡಿದ್ದಾರೆ.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿ ತೇಜಸ್ ಮೋರೆ ಪ್ರತಿಷ್ಠಿತ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಇಂಟರ್ನಶಿಪ್ ಸಂಪೂರ್ಣಗೊಳಿಸಿದ್ದಾನೆ. ರಾಮನಗರದ ಬಿಡದಿಯಲ್ಲಿರುವ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಮೂರು ತಿಂಗಳ ಅವಧಿಯ ಇಂಟರ್ನಶಿಪ್ ನಲ್ಲಿ ವಾಹನ ತಯಾರಿಕಾ ಪ್ರಕ್ರಿಯೆಯಲ್ಲಿ ಕೆಲವು ನ್ಯೂನತೆಗಳಿಗೆ ಪರಿಹಾರ ಒದಗಿಸುವ ಪ್ರಾಜೆಕ್ಟ್ ಕೈಗೊಂಡು ಕಂಪನಿಯ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.

ಸಿವಿಲ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಗಿರಿಧರ್ ಹೆಚ್ ಮತ್ತು ಮನೋಜ್ ಎಚ್ ಅರ್ಬೇ ಸ್ಟಕ್ಚರ್ ಪ್ರೈ ಲಿ. ನಲ್ಲಿ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ. ರಾಜೇಶ್ವರಿ ಎನ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಸಂತಸ ವ್ಯಕ್ತಪಡಿಸಿದ್ದಾರೆ. ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಹರ್ಷ ತಂದಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿಡಿಐಟಿ ಪ್ರಾಧ್ಯಾಪಕರ, ವಿದ್ಯಾರ್ಥಿಗಳ ಸಾಧನೆ

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಶೈಕ್ಷಣಿಕ ಮತ್ತು ಸಂಶೋಧನ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಅವರ ಸಂಶೋಧನಾ ಪ್ರಬಂಧ 'ವೆಕ್ಟರ್ ಕ್ವಾಂಟೈಸೇಷನ್ ಬೇಸ್ಡ್ ಕಂಪ್ರೆಶನ್ ಯೂಸಿಂಗ್ ಡಿಸಿಟಿ ಅಂಡ್ ಎಸ್ ವಿ ಡಿ ಅಲ್ಗೋರಿದಮ್ ಆಫ್ ಡಿಜಿಟಲ್ ಇಮೇಜ್' ಅಂತರಾಷ್ಟ್ರೀಯ ಮಟ್ಟದ ತಾಂತ್ರಿಕ ಪತ್ರಿಕೆ ಸ್ಪ್ರಿಂಜರ್ ನಲ್ಲಿ ಪ್ರಕಟಗೊಳ್ಳಲು ಆಯ್ಕೆಯಾಗಿದೆ. ಇದೇ ವಿಭಾಗದ 7ನೇ ಸೆಮಿಸ್ಟರ್ ನ ವಿದ್ಯಾರ್ಥಿನಿ ಸಂಜನಾ ಶಿವಪುರ ಮಠ ಹಾಗೂ ಸಂಜನಾ ಸವದತ್ತಿಗೆ ಅಂತರರಾಷ್ಟ್ರೀಯ ಮಟ್ಟದ ಐಇಇಇ ಸಂಸ್ಥೆಯು 50,000 ಮತ್ತು 10,000 ರೂಪಾಯಿ ವಿದ್ಯಾರ್ಥಿ ವೇತನ ನೀಡಿದೆ. ಇ ಆ್ಯಂಡ್ ಸಿ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಸಿರಿಗೌರಿ ಎಂ ಹಾಗೂ ತರುಣ್ ಎಸ್ ಗೆ ಎಐಸಿಟಿಇ ಯು ಭಾರತ ಸರ್ಕಾರದ ಸಿ- ಡಾಕ್ ತ್ರಿವೇಂದ್ರಂನಲ್ಲಿ ವೇತನಸಹಿತ ಇಂಟರ್ನಶಿಪ್‌ಗಾಗಿ ಆಯ್ಕೆ ಗೊಂಡಿದ್ದಾರೆ.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿ ತೇಜಸ್ ಮೋರೆ ಪ್ರತಿಷ್ಠಿತ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಇಂಟರ್ನಶಿಪ್ ಸಂಪೂರ್ಣಗೊಳಿಸಿದ್ದಾನೆ. ರಾಮನಗರದ ಬಿಡದಿಯಲ್ಲಿರುವ ಟೊಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಮೂರು ತಿಂಗಳ ಅವಧಿಯ ಇಂಟರ್ನಶಿಪ್ ನಲ್ಲಿ ವಾಹನ ತಯಾರಿಕಾ ಪ್ರಕ್ರಿಯೆಯಲ್ಲಿ ಕೆಲವು ನ್ಯೂನತೆಗಳಿಗೆ ಪರಿಹಾರ ಒದಗಿಸುವ ಪ್ರಾಜೆಕ್ಟ್ ಕೈಗೊಂಡು ಕಂಪನಿಯ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.

ಸಿವಿಲ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಗಿರಿಧರ್ ಹೆಚ್ ಮತ್ತು ಮನೋಜ್ ಎಚ್ ಅರ್ಬೇ ಸ್ಟ್ರಕ್ಚರ್ ಪ್ರೈ.ಲಿ.ನಲ್ಲಿ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ. ರಾಜೇಶ್ವರಿ ಎನ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಸಂತಸ ವ್ಯಕ್ತಪಡಿಸಿದ್ದಾರೆ. ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಹರ್ಷ ತಂದಿದೆ ಎಂದು ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಲೋಕಧ್ವನಿ

# ವಿಡಿಐಟಿ ಪ್ರಾಧ್ಯಾಪಕರು, ವಿದ್ಯಾರ್ಥಿಗಳ ಸಾಧನೆ

**ಹಳಿಯಾಳ:** ಕೆಎಲ್ಎಸ್ ವಿಡಿಐಟಿ ಹಳಿಯಾಳದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಶೈಕ್ಷಣಿಕ ಮತ್ತು ಸಂಶೋಧನ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ.

ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಅವರ ಸಂಶೋಧನಾ ಪ್ರಬಂಧ ವೆಕ್ಟರ್ ಕ್ವಾಂಟೈಸೇಷನ್ ಬೇಸ್ಡ್ ಕಂಪ್ರೆಶನ್ ಯೂಸಿಂಗ್ ಡಿಸಿಟಿ ಆ್ಯಂಡ್ ಎಸ್‌ವಿಡಿ ಅಲ್ಗೋರಿದಮ್ ಆಫ್ ಡಿಜಿಟಲ್ ಇಮೇಜ್ ಅಂತಾರಾಷ್ಟ್ರೀಯ ಮಟ್ಟದ ತಾಂತ್ರಿಕ ಪತ್ರಿಕೆ ಸ್ಪ್ರಿಂಜರ್‌ನಲ್ಲಿ ಪ್ರಕಟಗೊಳ್ಳಲು ಆಯ್ಕೆಯಾಗಿದೆ.

ಇದೇ ವಿಭಾಗದ 7ನೇ ಸೆಮಿಸ್ಟರ್‌ನ ವಿದ್ಯಾರ್ಥಿನಿ ಸಂಜನಾ ಶಿವಪುರ ಮಠ ಹಾಗೂ ಸಂಜನಾ ಸವದತ್ತಿಗೆ ಅಂತಾರಾಷ್ಟ್ರೀಯ ಮಟ್ಟದ ಐಇಇಇ ಸಂಸ್ಥೆಯು 50,000 ಮತ್ತು 10,000 ರೂಪಾಯಿ ವಿದ್ಯಾರ್ಥಿ ವೇತನ ನೀಡಿದೆ.

ಇ ಆಂಡ್ ಸಿ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಸಿರಿಗೌರಿ ಎಂ ಹಾಗೂ ತರುಣ್ ಎಸ್ ಎಐಸಿಟಿಇ ಯು ಭಾರತ ಸರ್ಕಾರದ ಸಿ- ಡಾಕ್ ತ್ರಿವೇಂದ್ರಂನಲ್ಲಿ ವೇತನಸಹಿತ ಇಂಟರ್ನ್‌ಶಿಪ್ ಗಾಗಿ ಆಯ್ಕೆ ಗೊಂಡಿದ್ದಾರೆ.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿ ತೇಜಸ್ ಮೋರೆ ಪ್ರತಿಷ್ಠಿತ ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಇಂಟರ್ನ್‌ಶಿಪ್ ಸಂಪೂರ್ಣಗೊಳಿಸಿದ್ದಾನೆ. ರಾಮನಗರದ



ಬಿಡದಿಯಲ್ಲಿರುವ ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಮೂರು ತಿಂಗಳ ಅವಧಿಯ ಇಂಟರ್ನಶಿಪ್ ನಲ್ಲಿ ವಾಹನ ತಯಾರಿಕಾ ಪ್ರಕ್ರಿಯೆಯಲ್ಲಿ ಕೆಲವು ನ್ಯೂನತೆಗಳಿಗೆ ಪರಿಹಾರ ಒದಗಿಸುವ ಪ್ರಾಜೆಕ್ಟ್ ಕೈಗೊಂಡು ಕಂಪನಿಯ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.

ಸಿವಿಲ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಗಿರಿಧರ್ ಎಚ್ ಮತ್ತು ಮನೋಜ್ ಎಚ್ ಆರ್ಬೇ ಸ್ಟ್ರಕ್ಚರ್ ಪ್ರೈ. ಲಿ. ನಲ್ಲಿ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ. ರಾಜೇಶ್ವರಿ ಎನ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಸಂತಸ ವ್ಯಕ್ತಪಡಿಸಿದ್ದಾರೆ. ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಹರ್ಷ ತಂದಿದೆ ಎಂದು ಪ್ರಾಚಾರ್ಯ ಡಾ. ವಿ.ಎ ಕುಲಕರ್ಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಿ ಡಿ ಐ ಟಿ ಪ್ರಾಧ್ಯಾಪಕರು, ವಿದ್ಯಾರ್ಥಿಗಳ ಸಾಧನೆ

»ಜನಮಾಧ್ಯಮ, ಹಳಿಯಾಳ: ಕೆಎಲ್‌ಎಸ್ ವಿಡಿಐಟಿ ಹಳಿಯಾಳದ ವಿದ್ಯಾರ್ಥಿಗಳು ಹಾಗೂ ಪ್ರಾಧ್ಯಾಪಕರು ಶೈಕ್ಷಣಿಕ ಮತ್ತು ಸಂಶೋಧನ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿದ್ದಾರೆ. ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್ ಅವರ ಸಂಶೋಧನಾ ಪ್ರಬಂಧ 'ವೆಕ್ಟರ್ ಕ್ವಾಂಟೈಸೇಷನ್ ಬೇಸ್ಡ್ ಕಂಪ್ರೆಶನ್ ಯೂಸಿಂಗ್ ಡಿಸಿಟಿ ಆ್ಯಂಡ್ ಎಸ್ ವಿ ಡಿ ಅಲ್ಗೋರಿದಮ್ ಆಫ್ ಡಿಜಿಟಲ್ ಇಮೇಜ್' ಅಂತರಾಷ್ಟ್ರೀಯ ಮಟ್ಟದ ತಾಂತ್ರಿಕ ಪತ್ರಿಕೆ ಸ್ಪ್ರಿಂಜರ್‌ನಲ್ಲಿ ಪ್ರಕಟಗೊಳ್ಳಲು ಆಯ್ಕೆಯಾಗಿದೆ. ಇದೇ ವಿಭಾಗದ 7ನೇ ಸೆಮಿಸ್ಟರ್‌ನ ವಿದ್ಯಾರ್ಥಿನಿ ಸಂಜನಾ ಶಿವಪುರ ಮಠ ಹಾಗೂ ಸಂಜನಾ ಸವದತ್ತಿಗೆ ಅಂತರರಾಷ್ಟ್ರೀಯ ಮಟ್ಟದ ಐ ಇ ಇ ಇ ಸಂಸ್ಥೆಯು 50,000 ಮತ್ತು 10,000 ರೂಪಾಯಿ ವಿದ್ಯಾರ್ಥಿ ವೇತನ ನೀಡಿದೆ. ಇ ಆ್ಯಂಡ್ ಸಿ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಸಿರಿಗೌರಿ ಎಂ. ಹಾಗೂ ತರುಣ್ ಎಸ್. ಗೆ ಎ ಐ ಸಿ ಟಿ ಇ ಯು ಭಾರತ ಸರ್ಕಾರದ ಸಿ- ಡಾಕ್ ತ್ರಿವೇಂದ್ರಂನಲ್ಲಿ ವೇತನಸಹಿತ ಇಂಟರ್ನಶಿಪ್ ಗಾಗಿ ಆಯ್ಕೆ ಗೊಂಡಿದ್ದಾರೆ.

ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿ ತೇಜಸ್ ಮೋರೆ ಪ್ರತಿಷ್ಠಿತ ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಇಂಟರ್ನಶಿಪ್ ಸಂಪೂರ್ಣಗೊಳಿಸಿದ್ದಾನೆ. ರಾಮನಗರದ ಬಿಡದಿಯಲ್ಲಿರುವ ಟಯೋಟಾ ಕಿರ್ಲೋಸ್ಕರ್ ಸಂಸ್ಥೆಯಲ್ಲಿ ಮೂರು ತಿಂಗಳ ಅವಧಿಯ ಇಂಟರ್ನಶಿಪ್‌ನಲ್ಲಿ ವಾಹನ ತಯಾರಿಕಾ ಪ್ರಕ್ರಿಯೆಯಲ್ಲಿ ಕೆಲವು ನ್ಯೂನತೆಗಳಿಗೆ ಪರಿಹಾರ ಒದಗಿಸುವ ಪ್ರಾಜೆಕ್ಟ್ ಕೈಗೊಂಡು ಕಂಪನಿಯ ಮೆಚ್ಚುಗೆಗೆ ಪಾತ್ರನಾಗಿದ್ದಾನೆ.

ಸಿವಿಲ್ ವಿಭಾಗದ ಕೊನೆಯ ವರ್ಷದ ವಿದ್ಯಾರ್ಥಿಗಳಾದ ಗಿರಿಧರ್ ಹೆಚ್ ಮತ್ತು ಮನೋಜ್ ಎಚ್ ಅರ್ಬೆಸ್ಟ್ರಕ್ಚರ್ ಪ್ರೈ. ಲಿ. ನಲ್ಲಿ ಉದ್ಯೋಗಾವಕಾಶ ಪಡೆದುಕೊಂಡಿದ್ದಾರೆ. ವಿದ್ಯಾರ್ಥಿಗಳ ಈ ಸಾಧನೆಗೆ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಶನ್ ವಿಭಾಗದ ಮುಖ್ಯಸ್ಥ ಡಾ. ಮಹೇಂದ್ರ ದೀಕ್ಷಿತ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥೆ ಪ್ರೊ. ರಾಜೇಶ್ವರಿ ಎನ್, ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಸಂತಸ ವ್ಯಕ್ತಪಡಿಸಿದ್ದಾರೆ. ಮಹಾವಿದ್ಯಾಲಯದ ಪ್ರಾಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಶೈಕ್ಷಣಿಕ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡುತ್ತಿರುವುದು ಹರ್ಷ ತಂದಿದೆ ಎಂದು ಪ್ರಾಚಾರ್ಯ ಡಾ. ವಿ ಎ ಕುಲಕರ್ಣಿ ತಮ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.